ಫಾರೆಸ್ಟ್ ಇಲಾಖೆ.

ಇ ಸ್ತಿ ಹಾ ರ್ ನಾ ಮೆ.

ತಾರೀಖು 21ನೇ ಡಿಸಂಬರ್ 1886.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು, ಯಿದರಡೀಲಿ ಕಂಡ ಚೌಪೀನೆಗಳನ್ನು ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಂಜರ್‌ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳ ದಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾಗಳು.	ಕಾಡಜಾತಿ ನಾಟಾಗಳು.	ಸಾಗವಾನಿ ಮತ್ತು ಕಾಡಜಾತಿ ಬೆಲಗಗಳು.	ಷರಾ.
ತಿರಾಳಕೊಪ್ಪ	15ನೇ ಜನವರೀ 1887	..	80	120	ಹರಾಜ್ ಕಾಲದಲ್ಲಿ ಸರಿಯಾದ ರೇಟ್ ಬಿಚ್ಚಿಗಾರರು ಹಾಜರಾಗಿಲ್ಲವಾದ್ದರಿಂದ ಈ ನಾಟಾಗಳನ್ನು ಹರಾಜ್ ಮಾಡಲಿಲ್ಲ.
ತೀರ್ಥಪುರ ಡಿಪೊ	18ನೇ ಡಿಟೋ 1887	..	40	210	
ತೀರ್ಥಕೆರೆ ಡಿಪೊ	25ನೇ ಡಿಟೋ 1887	50	20	1000	
ಲಕ್ಕವಳ್ಳಿ ಡಿಪೊ	1ನೇ ಫಿಬ್ರವರೀ 1887	650	650	2000	
ಕಣಬೂರ್ ಡಿಪೊ ತಾಲ್ಲೂಕು ಕೊಪ್ಪ	5ನೇ ಫಿಬ್ರವರೀ 1887	500	200	30	
ಆಯನೂರು ಡಿಪೊ ಶಿವಮೊಗ್ಗಾ ತಾಲ್ಲೂಕು	15ನೇ ಡಿಟೋ 1887	100	..	..	

ಹರಾಜಿನ ಷರತುಗಳು—ಮೈಸೂರು ಗೆಜಟ್‌ನಲ್ಲಿ 1873ನೇ ಇಸವಿ ಜೂನ್ 2ನೇ ಮುಕ್ತಂ ನಂಬರು 20ನೇ ಯಿಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ್ ಯಿರತಕ್ಕದ್ದು. ಮತ್ತು ಹರಾಜಕಾಲದಲ್ಲಿ ವೋದಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರಯವರ ಕೋರ್ಟಿನಲ್ಲಿ.

1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 931.

ಅರ್ಜೀದಾರ್ ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ಕಸಬಾದಲ್ಲಿ ಇರುವ ನೆಟ್ಟಕುಂಟೆ ನಂಜಪ್ಪನವರ ಮಕ್ಕಳು ನಂಜುಂಡಪ್ಪ, 2ನೇ ಈತನ ತಮ್ಮ ಈರಪ್ಪ 1—2ನೇ ಅರ್ಜೀದಾರರು ಮೈನರ್‌ಗಳು ಇವರ ಗಾರಡಿಯರ್ ಮತ್ತು ಮಾವನಾದ ಮರಿಯಣ್ಣ,

ಅರ್ಜಿದಾರಗೆ ಫಾತಿಯೂದ ನಂಜಪ್ಪ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ತನಾಗಿ ಮೃತಪಟ್ಟ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಲೇಣೆಯನ್ನು ವಸೂಲ್ ಮಾಡುವದಕ್ಕೂ ಸದರೀಯವನ ಮೈನರ್ ಮಕ್ಕಳಾದ 1ನೇ ನಂಜುಂಡಪ್ಪ 2ನೇ ಈರಪ್ಪ ಯಿವರಿಗೆ ಇವರ ಮಾವ ಮರಿಯಪ್ಪ ಗಾರಡಿಯರ್ ಆಗಿ ಯಿರಬೇಕೆಂತಲೂ ಸದರೀ ಲೇಣೆಯನ್ನು ವಸೂಲ್ ಮಾಡಿಕೊಳ್ಳುವದಕ್ಕೂ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಅರ್ಜೀದಾರ್ರು ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತನ್ನು 1887ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ನಂಜಪ್ಪನಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ತಾರೀಖು 7ನೇ ಜನವರೀ 1887ನೇ ಇಸವಿ.

ಸಿ. ಕೈಸ್,
ಸಬ್ ಜಡ್ಜ್.